# <u>ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,</u>

# <u>ನಂಜನಗೂಡು</u>

**ಓ ಎಸ್ ನಂ. 568-2017** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಯು.ಎನ್.ರಾಘವೇಂದ್ರರಾವ್<br>62 ವರ್ಷ<br>ವ್ಯವಸಾಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 22-08-2019. |

**<u>ಮುಖ್ಯ ವಿಚಾರಣೆಃ  ವಾದಿ ಪರ ವಕೀಲರಾದ ಶ್ರೀಮತಿ  ಎ.ಎಸ್.ವಿ.  ರವರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ  ಎಲ್ಲಾ ವಿಷಯಗಳು ಸತ್ಯವಾಗಿದ್ದು  ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ದಿಃ24-11-2014 ರಂದು ಪ್ರತಿವಾದಿಗಳು ನನಗೆ ಬರೆದುಕೊಟ್ಟ ಆನ್ ಡಿಮ್ಯಾಂಡ್ ಪ್ರನೋಟ್‌ನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ಪ್ರತಿವಾದಿಗಳ ಸಹಿ(ಹೆಬ್ಬೆಟಿನ ಗುರುತು)ಗಳನ್ನು  ನಾನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1(ಎ) ಮತ್ತು  ನಿಪಿ-1(ಬಿ) ಎಂದು, ದಿಃ24-11-2014 ರಂದು ಪ್ರತಿವಾದಿಗಳು ನನಗೆ ಬರೆದುಕೊಟ್ಟ ಹಣ ಸಂದಾಯ ರಶೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಅದರ ಮೇಲಿರುವ ಪ್ರತಿವಾದಿಗಳ ಸಹಿ(ಹೆಬ್ಬೆಟಿನ ಗುರುತು)ಗಳನ್ನು ನಾನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2(ಎ) ಮತ್ತು  ನಿಪಿ-2(ಬಿ) ಎಂದು, ದಿಃ06-10-2017 ರಂದು  ನಾನು ವಕೀಲರ ಮೂಲಕ ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸ್‌ನ ಕಛೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, 2 ನೇ ಪ್ರತಿವಾದಿಗೆ ಜಾರಿಯಾದ  ಅಂಚೆ ಸ್ವೀಕೃತಿಯನ್ನು  ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು,

ಪ್ರತಿವಾದಿ–1 ರವರಿಗೆ ಕಳುಹಿಸಿದ ಜಾರಿಯಾಗದೇ ವಾಪಸ್ಸು ಬಂದ ಅಂಚೆ ಲಕೋಟೆಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

( ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**